ದಿನಾಂಕಃ 15-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ ಎದುರುದಾರರ ಪರ ವಕೀಲರಿಂದ

ನಾನು ಬಿ.ಕಾಂ. ಪದವಿ ಓದಿದ್ದೇನೆ. ನನ್ನ ಮದುವೆ ಪೂರ್ವದಲ್ಲಿ ನಾನು ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ ಅಲ್ಲ.

ಎದುರುದಾರನು ಯಾವುದೇ ವಿದ್ಯಾಭ್ಯಾಸ ಮಾಡಿಲ್ಲ ಎಂದರೆ, ಐಟಿಐ ಓದಿದ್ದಾನೆ ಎಂದು ಹೇಳಿದ್ದರು. ಆತನು ಐಟಿಐ ಓದಿದ್ದಾನೆ ಎಂದು ನಾನು ಯಾವುದೇ ದಾಖಲೆಯನ್ನು ಹಾಜರಪಡಿಸಿಲ್ಲ. ನನ್ನ ಅರ್ಜಿಯಲ್ಲಿ ನನ್ನ ಮದುವೆಯಾದ ನಂತರ ಕೇವಲ 1 ತಿಂಗಳು ಮಾತ್ರ 1 ನೇ ಎದುರುದಾರರೊಂದಿಗೆ ಜೀವನ ನಡೆಸಿದ್ದೇನೆ ಎಂದು ಬರೆಸಿದ್ದೇನೆ ಎಂದರೆ, 1 ತಿಂಗಳು ಮಾತ್ರ ಜೀವನ ನಡೆಸಿದ್ದೇನೆ ಎಂದು ಬರೆಸಿದ್ದೇನೆ. ನಾನು ಸುಮಾರು 1 ವರ್ಷದವರೆಗೆ 1 ನೇ ಎದುರುದಾರನೊಂದಿಗೆ ಸಂಸಾರ ಮಾಡಿದ್ದೇನೆ.

2019 ನೇ ಸಾಲಿನಲ್ಲಿ ನಾನು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದೇನೆ ಅದೇರೀತಿ ನಾನು ವಿವಾಹ ವಿಚ್ಛೇದನ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿ. ಅದರಲ್ಲಿ ವಿವಾಹ ವಿಚ್ಛೇದನ ನೀಡಲಾಗಿದೆ ಎಂದರೆ ಸರಿ. ಅದರಲ್ಲಿ ಎದುರುದಾರರು ತಕರಾರು ಹಾಕಿಲ್ಲ ಮತ್ತು ಯಾವುದೇ ಪಾಟೀ ಸವಾಲು ಮಾಡಿಲ್ಲ ಎಂದರೆ ಸರಿ ಅಲ್ಲ.

ಮಾನವಿಯಲ್ಲಿರುವ ಎದುರುದಾರನ ಮನೆಯನ್ನು ನಾನು ನೋಡಿಲ್ಲ. ನನ್ನ ಮದುವೆ ಆಗುವ ಪೂರ್ವದಲ್ಲಿ ಎದುರುದಾರರು ಬೇರೆ ಮನೆಯಲ್ಲಿ ಇದ್ದರು ಎಂದು ನನ್ನ ಅರ್ಜಿಯಲ್ಲಿ ಹೇಳಿ ಬರೆಸಿಲ್ಲ. ನನ್ನ ಮದುವೆಯಾದ ನಂತರ ಎದುರುದಾರರೊಂದಿಗೆ ಯಾವ ಓಣಿಯಲ್ಲಿ ನಮ್ಮ ಮನೆ ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆಯಾಗಿ ಗಂಡನ ಮನೆಗೆ ಹೋದ ನಂತರ ನಮ್ಮ ತಂದೆ ಒಂದು ಬಾರಿ ಅಲ್ಲಿಗೆ ಬಂದಿದ್ದ. ನಮ್ಮ ತಂದೆಯನ್ನು ಎದುರುದಾರ ಕರೆದುಕೊಂಡು ಬಂದಿದ್ದ. ಪುನಃ ಅವರೇ ಬಿಟ್ಟು ಬಂದಿದ್ದರು.

ಎದುರುದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಾಗ ಅವರ ವಿಳಾಸ ಹೇಳಿ ಬರೆಸಿದ್ದೆ ಎಂದರೆ ಸರಿ.

2 ನೇ ಎದುರುದಾರರು ನನಗೆ ಕಿರುಕುಳ ನೀಡುತ್ತಿದ್ದರು ಎಂದು ಸುಳ್ಳು ಹೇಳಿ ಬರೆಸಿದ್ದೇನೆ

ಎಂದರೆ ಸರಿ ಅಲ್ಲ. ಆ ಸಂದರ್ಭದಲ್ಲಿ ನಮ್ಮನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ನಾನು ಎದುರುದಾರನ ಮನೆಯಲ್ಲಿದ್ದಾಗ ಎಷ್ಟು ಹಬ್ಬ ಆಚರಿಸಿದ್ದೇನೆ ನನಗೆ ಗೊತ್ತಿಲ್ಲ, ಆದರೆ ವರ್ಷದಲ್ಲಿ ಬರುವ ಹಬ್ಬಗಳನ್ನು ಆಚರಿಸಿದ್ದೇವೆ. ಶಿವರಾತ್ರಿ ಹಬ್ಬದ ದಿನ ನನ್ನನ್ನು ಹೊರಗಡೆ ಕರೆದುಕೊಂಡು ಹೋಗಿರಲಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.